ಓ ಎಸ್ ನಂ. 93/2018
ಪಿ ಡಬ್ಲ್ಯೂ- 1

(ಇಂದು ದಿಃ 23-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಪಾಟೀ ಸವಾಲು **:- ಶ್ರೀ ಎಮ್ ಎಸ್ ಹೆಚ್ ವಕೀಲರಿಂದ :**

1 ನೇ ಪ್ರತಿವಾದಿ ಮದುವೆಯಾದಗಿನಿಂದ ಬೆನಕನಹಳ್ಳಿಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ದಾನ ಪತ್ರ ಆದ ದಿನದಿಂದ ದಾವಾ ಐಟೆಮ್ ನಂ 1 ರಿಂದ 9 ರಲ್ಲಿ ಅವರೇ ಸ್ವಾಧೀನದಲ್ಲಿ ಇದ್ದು ಉಳಿಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ವಾದಿ ಮಹದೇವಮ್ಮ ಮತ್ತು 1 ನೇ ಪ್ರತಿವಾದಿ ಬಸಲಿಂಗಮ್ಮ ಸಮನಾಗಿ ಸ್ವಾಧೀನದಲ್ಲಿದ್ದರು ಎಂದು ಹೇಳುತ್ತಾರೆ. ದಾವಾ ಐಟೆಮ್ ನಂ 10 ರಿಂದ 14 , 2 ರಿಂದ 6 ನೇ ಪ್ರತಿವಾದಿಯರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಐಟೆಮ್ ನಂ 1 ರಿಂದ 9 1 ನೇ ಪ್ರತಿವಾದಿಯ ತಂದೆ ಈರಪ್ಪರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತು ಗಳು ಪ್ರತಿವಾದಿಯರಿಗೆ ಸೇರಿದ ಸ್ವತ್ತುಗಳು ಆಗಿರುವುದರಿಂದ ಅವರು ತಮ್ಮ ತಮ್ಮಲ್ಲಿ ಭಾಗ ಮಾಡಿಕೊಂಡಿರುವುದು ಸರಿಯಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಳಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇಲ್ಲ ಮತ್ತು ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಎಷ್ಟು ಬೆಲೆ ಬಾಳುತ್ತವೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರಿಗೆ ಸಂಬಂಧ ಪಟ್ಟಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟೆಮ್ 10 ರಿಂದ 14 ನ್ನು ದಾವಾ ಐಟೆಮ್ ನಂ 1 ರಿಂದ 9 ಆಸ್ತಿಗಳಿಂದ ಬಂದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಂದ ಬಂದ ಆದಾಯವನ್ನು ವಾದಿಯರು ಮತ್ತು ಪ್ರತಿವಾದಿಯರು ಹಂಚಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯ ಸ್ವಾಧೀನದಲ್ಲಿ ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟೆಮ್ ನಂ 1 ರಿಂದ 9 ನ್ನು 1 ನೇ ಪ್ರತಿವಾದಿಗೆ ಅವರ ತಂದೆ ದಾನ ಪತ್ರದ ಮೂಲಕ ಕೊಟ್ಟ ಸಂಗತಿ ಗೊತ್ತಿದ್ದರು ಕೂಡ ನನ್ನ ತಾಯಿಗೆ ಅವುಗಳಲ್ಲಿ ಭಾಗ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ**.**